**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ರೋಣ**

ಸಿ.ಸಿ. ನಂ. 1084/2019

ಸಿ.ಡಬ್ಲೂಃ 1 ಪಿ.ಡಬ್ಲೂಃ 1

ಹೆಸರುಃ ಶರಣವ್ವ
ಗಂಡನ ಹೆಸರುಃ ಮಲ್ಲಪ್ಪ ಗೂಸಳ್
ವಯಸ್ಸುಃ 55 ವರ್ಷ
ಉದ್ಯೋಗಃ ಮನೆಗೆಲಸ
ವಿಳಾಸಃ ಬಳಗೋಡ, ತಾಃ ರೋಣ.

**ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 08-12-2022 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ - ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದಃ**

1. ನ್ಯಾಯಾಲಯದ ಮುಂದೆ ಇರುವ ಆರೋಪಿತರು ನನ್ನ ಗಂಡನ ಅಣ್ಣ, ಅಣ್ಣನ ಮಕ್ಕಳು. ಆರೋಪಿತರು ನನ್ನ ಹೆಸರಿನಲ್ಲಿ ಬೇರೆ ಒಬ್ಬ ಹೆಣ್ಣು ಮಗಳನ್ನು ಕರೆದುಕೊಂಡು ಹೋಗಿ , ಪಿ ಎಲ್ ಡಿ ಬ್ಯಾಂಕ ರೋಣದಲ್ಲಿ ಟ್ರ್ಯಾಕ್ಟರ ಸಾಲ ರೂ.7,39,000/- ಹಣ ಪಡೆದಿದ್ದಾರೆ. ನಾನು ರೋಣದ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ನನ್ನ ಗಂಡನ ಅಣ್ಣ ತಮ್ಮಂದಿರ ವಿರುದ್ಧ ನಾನು ಪಾಲುವಾಟ್ನಿಗಾಗಿ ದಾವೆ ಮಾಡಿದ್ದೆ. ಸದರಿ ಜಮೀನು ಸರ್ವೇ ನಂ.50 ಇರುತ್ತದೆ. ನನ್ನ ಬದಲಾಗಿ, ನನ್ನ ಚಿಕ್ಕವ್ವ ನಾಗವ್ವ ನೀಲಪ್ಪ ಮಲ್ಲಾಪೂರ ಇವಳನ್ನು ಕರೆದುಕೊಂಡು ಹೋಗಿ, ನಾನೇ ಎಂದು ಬ್ಯಾಂಕಿನವರಿಗೆ ನಂಬಿಸಿ, ನಾನು ಸಹಿ ಮಾಡದೇ ಇದ್ದರೂ ನನ್ನ ಹೆಸನರಿಲ್ಲಿ ಆರೋಪಿತರಾದ ಕರಿಯಪ್ಪ ಪಡಿಯಪ್ಪ ಗೌಸಳ್ ಮತ್ತು ಶಾಂತಪ್ಪ , ಮಲ್ಲಪ್ಪ , ಹುಲಿಗೆವ್ವ, ಬಸವ್ವ ಇವರುಗಳು ಸಾಲ ಪಡೆದಿದ್ದಾರೆ. ಈ ರೀತಿ ಸುಮಾರು 4

ವರ್ಷಗಳ ಹಿಂದೆ ಸಾಲ ಮಾಡಿದ್ದಾರೆ. ನಾನು ಸಿನಿಯರ ಸಿವಿಲ್ ನ್ಯಾಯಾಲಯದಲ್ಲಿ ಕೇಸ ಹಾಕಿದಾಗ , ಜಮೀನಿನ ಉತಾರ ತೆಗೆಸಿದಾಗ ಈ ವಿಚಾರ ಗೊತ್ತಾಯಿತು. ನಂತರ ನಾನು ಪೊಲೀಸ ಠಾಣೆಗೆ ಹೋಗಿ ಅವರ ವಿರುದ್ಧ ದೂರು ದಾಖಲಿಸಿದೆ. ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಯಿತು. ಅದನ್ನು ಸಾಕ್ಷಿ ನೋಡಿ, ಅದರಲ್ಲಿರುವ ಸಹಿಯನ್ನು ತನ್ನದು ಎಂದು ಹೇಳಿರುತ್ತಾರೆ. ಸದರಿ ದಾಖಲೆ ದೂರಾಗಿದ್ದು, ಅದನ್ನು ನಿಪಿಃ 1 ಎಂದು ಸಾಕ್ಷಿಯ ಸಹಿಯನ್ನು ನಿಪಿಃ 1 ಎ ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಸಮಯ ಕೇಳಿದ್ದು, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**( ಆದಿತ್ಯ ಆರ್ ಕಲಾಲ್ )**
**ಹೆಚ್ಚುವರಿ ಸಿವಿಲ್ ಹಾಗೂ ಜೆ .ಎಮ್ .ಎಫ್.ಸಿ**
**ನ್ಯಾಯಾಧೀಶರು ರೋಣ .**